**<u>ದಿನಾಂಕಃ 08–01–2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ_ಪಾಟೀ ಸವಾಲುಃ ಶ್ರೀ ಎಫ್ ಎಮ್ ಎಮ್ ವಕೀಲರಿಂದಃ</u>**

ಈ ದಾವೆಯಲ್ಲಿ ನನ್ನ ತಂದೆ 3 ನೇ ಪ್ರತಿವಾದಿ ಸಲ್ಲಿಸಿದ ಕೈಪಿಯತ್ತನ್ನು ನಾನು ನೋಡಿರುತ್ತೇನೆ. ಸಾಕ್ಷಿ 3 ನೇ ಪ್ರತಿವಾದಿಯ ಕೈಪಿಯತನಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಕೈಪಿಯತ್ತನ್ನು ನಿಪಿ-25 ಎಂದು ಕೊನೆ ಪುಟದ ಸಹಿಯನ್ನು 25-ಎ ಎಂದು ಗುರುಸಲಾಯಿತು. ಪೋತಿ 1 ನೇ ಪ್ರತಿವಾದಿ ಮೃತ ಪಡೆಯುವವರೆಗೆ ಪಾಟಿಲಿಕೆಯನ್ನು ಮಾಡಿದ ಬಗ್ಗೆ ಮಾಶಾಸನ ಪಡೆಯುತ್ತಿದ್ದರು ಎಂದರೆ ನಿಜ. ಅವರು ನಮ್ಮ ಗ್ರಾಮದ ಬಸವೇಶ್ವರ ದೇವಸ್ಥಾನದ ಅಧ್ಯಕ್ಷರು ಆಗಿದ್ದರು ಎಂದರೆ ನಿಜ. ಅವರು ಜೀವಿತ ಕಾಲದಲ್ಲಿ ಅನೇಕ ಮೃತ್ಯು ಪತ್ರಕ್ಕೆ ಖರೀದಿ ಪತ್ರಕ್ಕೆ, ಖರೀದಿ ಕಾರಾರು ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದೇವಸ್ಥಾನದ ಅಧ್ಯಕ್ಷರಾಗಿ ಮತ್ತು ಮಾಶಾಸನ ಪಡೆದ ಬಗ್ಗೆ ಸಹಿ ಮಾಡಿದ್ದಕ್ಕೆ ದಾಖಲೆಗಳು ಇವೆ ಎಂದರೆ ನಿಜ. ದಿಃ 30-07-2001 ರಂದು ಆದ ನಿಂಗವ್ವ ಖರೀದಿಸಿದ ಖರೀದಿ ಪತ್ರಕ್ಕೆ 1 ನೇ ಸಾಕ್ಷಿಯಾಗಿ ಶಿವನಗೌಡ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅವರು ಶಿವನಗೌಡ ಹೇಮನಗೌಡ ಪಾಟೀಲ ಎಂದು ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸಿ.ಎ ಪಾಟೀಲ ಎಂದು ಸಹಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಈ ಬಗ್ಗೆ ನಾನು ಸುಳ್ಳು ಸಾಕ್ಷಿ ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ. ಶಿವನಗೌಡ ಅವರು ಆಸ್ತಿ ಮಂಜೂರಾದ ಬಗ್ಗೆ ಕಬುಲಾತಿ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ಜೆರಾಕ್ಸ ಅನ್ನು ತೋರಿಸಿ ಕೇಳಲಾಗಿ, ಸಾಕ್ಷಿ ಜೆರಾಕ್ಸ ಪತ್ರದಲ್ಲಿ ಹೇಳಲು ಆಗುವುದಿಲ್ಲ ಎಂದು ಹೇಳಿರುತ್ತಾರೆ. 28-06-1965 ರಲ್ಲಿ ಸಿದ್ದಪ್ಪ ಶಿವಪ್ಪ ಶಿವಪೂಜಿ ಅವರು ಬರೆದುಕೊಟ್ಟ ಮೃತ್ಯು ಪತ್ರಕ್ಕೆ 1 ನೇ ಪ್ರತಿವಾದಿ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಗೆ 2020 ರಲ್ಲಿ 90 ವರ್ಷ ಆಗಿತ್ತು ಎಂದರೆ ಸರಿಯಲ್ಲ. 60 ವರ್ಷ ಆಗಿರಬಹುದು. ನನಗೆ ಈಗ 39 ವಯಸ್ಸು, 2020 ರಲ್ಲಿ ನನ್ನ ತಂದೆಗೆ ಎಷ್ಟು ವರ್ಷ ವಯಸ್ಸಾಗಿತ್ತು ನನಗೆ ಗೊತ್ತಿರುವುದಿಲ್ಲ. 2020 ರಲ್ಲಿ

2 ನೇ ಪ್ರತಿವಾದಿಗೆ 70 ವರ್ಷ ವಯಸ್ಸಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಆಗ ನನ್ನ ತಂದೆಗೆ 65 ವರ್ಷ ವಯಸ್ಸಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. 2020 ರಲ್ಲಿ 1 ನೇ ಪ್ರತಿವಾದಿಗೆ 60 ವರ್ಷ ಆಗಿತ್ತು ಎಂದು ಉದ್ದೇಶ ಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ 2020 ರ ಮೊದಲು ಬಿಪಿ ಮತ್ತು ಸಕ್ಕರೆ ಖಾಯಲೆ ಇರುವುದರಿಂದ ಕಣ್ಣು ಸರಿಯಾಗಿ ಕಾಣುತ್ತಿರುವುದಿಲ್ಲ. ಕೀವಿ ಕೇಳುತ್ತಿರಲಿಲ್ಲ ಎಂದರೆ ಸರಿಯಲ್ಲ. ಅವರು ಬೇರೆಯವರ ಸಹಾಯದಿಂದ ದಿನನಿತ್ಯದ ಕೆಲಸ ಮಾಡಿಸಿಕೊಳ್ಳುತ್ತಿದ್ದ ಎಂದರೆ ಸರಿಯಲ್ಲ. ಅವರಿಗೆ ತಾನು ಏನು ಕೆಲಸ ಮಾಡುತ್ತೇನೆ ಎಂದು ಜ್ಞಾನ ಇರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ದೈಹಿಕ ಮತ್ತು ಮಾನಸಿಕ ಸ್ಥಿತಿ ಹದಗೆಟ್ಟಿತ್ತು ಎಂದರೆ ಸರಿಯಲ್ಲ. ಹೀಗಾಗಿ ಅವರು 2020 ರಲ್ಲಿ ಮೃತ ಪಟ್ಟರು ಎಂದರೆ ಸರಿಯಲ್ಲ. ಆದರೆ 2020 ರಲ್ಲಿ ಮೃತ ಪಟ್ಟಿರುತ್ತಾರೆ. ಮೃತ ಪಟ್ಟ ದಿನಾಂಕ ನೆನಪಿರುವುದಿಲ್ಲ. ಅವರಿಗೆ ಯಾರಿಗೂ ಸ್ವಚ್ಚಂದ ಮನಸ್ಸಿನಿಂದ ಈ ಕೆಲಸ ಮಾಡುತ್ತಿದ್ದೇನೆ ಎಂದು ಹೇಳುವ ಮನಸ್ಸು ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯ ಈಗ ದಿಃ 29-08-2020 ರ ದಾನ ಪತ್ರ ನೋಡಿ , 2 ನೇ ಪುಟ ಹಿಂಬಾಗದಲ್ಲಿ 2 ನೇ ಸಹಿಯನ್ನು ಶಿದ್ದನಗೌಡ ಬಸನಗೌಡ ಪಾಟೀಲ ರವರದು ಎಂದು ಒಪ್ಪಿಕೊಳ್ಳುತ್ತಾರೆ. ಅಲ್ಲಿ ಅವರು ಸಿ.ಎ. ಪಾಟೀಲ ಸಹಿ ಮಾಡಿರುತ್ತಾರೆ ಎಂದರೆ ನಿಜ. ದಾನ ಪತ್ರವನ್ನು ನಿಡಿ-7 ಎಂದು ಗುರುತಿಸಲಾಗಿದೆ. ಸಹಿಯನ್ನು ನಿಡಿ-7 ಎ ಎಂದು ಗುರುತಿಸಲಾಯಿತು. ನಿಡಿ-7 ರಲ್ಲಿ ಇರುವ ಸಿ.ಎ. ಪಾಟೀಲ ಎಂಬ ಎಲ್ಲಾ ಸಹಿಗಳು ನಿಡಿ-7 ಎ ಒಬ್ಬ ವ್ಯಕ್ತಿ ಮಾಡಿದ ಸಹಿ ಎಂದರೆ ನಿಜ. ಕೈಪಿಯತ ನಿಪಿ-25 ರಲ್ಲಿರುವ ಸಹಿ ನಿಡಿ-7 ರಲ್ಲಿ ಇರುವ ಸಹಿ ಒಬ್ಬ ವ್ಯಕ್ತಿ ಸಹಿ ಇರುತ್ತದೆ ಎಂದರೆ ಸರಿಯಲ್ಲ. ನಿಡಿ-7 ದಾನ ಪತ್ರ ರಿ.ಸ.ನಂ.10/3 ರ ಬಗ್ಗೆ 1 ನೇ ಪ್ರತಿವಾದಿ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಉಪನೋಂದಣಿ ಕಛೇರಿಯ ಅಧಿಕಾರಿಗಳು, ಪಿಸಿ ದೊಡ್ಡಮನಿ ವಕೀಲರು ಮಿಲಾಫಿಯಾಗಿ 1 ನೇ ಪ್ರತಿವಾದಿಯ ಪೋಟೋವನ್ನು ಮೊಬೈಲ್‌ನಲ್ಲಿ ತಂದು ನೊಂದಣಿ ಕಛೇರಿಯಲ್ಲಿ ಅಪ್‌ಲೋಡ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-7 ಅನ್ನು ಯಾರು ಬರೆದರು ಗೊತ್ತಿರುವುದಿಲ್ಲ. ನಿಡಿ-7 ರ

ಎಲ್ಲಾ ಪುಟದಲ್ಲಿ ಇರುವ 1 ನೇ ಪ್ರತಿವಾದಿ ಸಹಿ ದಾನ ಕೊಟ್ಟವರ ಸಹಿ ಎಂದು ಬರೆದಿರುವ ಸಹಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಡಿ-7 ರಲ್ಲಿ ಇರುವ ಎಲ್ಲಾ ಸಿ.ಎ ಪಾಟೀಲ ಎಂಬ ಸಹಿಗಳು ಒಂದಕ್ಕೊಂದು ವೆತಿರಿಕ್ತವಾಗಿವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ರಿ.ಸ.ನಂ. 10/3 ಹಿರೇನಂದಳ್ಳಿ ಗ್ರಾಮ 04 ಎಕರೆ 03 ಗುಂಟೆ ಜಮೀನನ್ನು ಬುದ್ದಿಪೂರ್ವಕವಾಗಿ ಯಾರ ಸಮಕ್ಷಮನೂ ನನಗೆ ದಾನ ಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಅದರಲ್ಲಿ ಇರುವ ಪೋಟೋ 1 ನೇ ಪ್ರತಿವಾದಿ ಬಂದು ಕೊಟ್ಟಂತಹ ಪೋಟೋ ಇರುವುದಿಲ್ಲ ಅಂದರೆ ಎಂದರೆ ಸರಿಯಲ್ಲ. ನಾನು ವಕೀರು ಮತ್ತು ಉಪನೋಂದಣಿ ಕಛೇರಿಯ ಅಧಿಕಾರಿಗಳು ಹಾಗೂ 3 ನೇ ಪ್ರತಿವಾದಿಯರು ಸೇರಿ ಕಾನೂನು ಬಾಹಿರವಾಗಿ ಸೇರಿ ದಾಖಲೆಯನ್ನು ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಇನ್ನೊಬ್ಬ ಸಾಕ್ಷಿ ಮಲ್ಲೇಶಪ್ಪ ಅವರ ಸಹಿಯನ್ನು ಗ್ರಾಮದಲ್ಲಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವಾದಿ ಪ್ರತಿವಾದಿಯರ ಎಕತ್ರ ಘರಾಣೇದ ಆಸ್ತಿಗಳು ಎಂದರೆ ಸರಿಯಲ್ಲ ರಿ.ಸ.ನಂ. 10/3 ಆಸ್ತಿಯನ್ನು ಎಕತ್ರ ಘರಾಣೇದ ಆದಾಯದಿಂದ 1 ನೇ ಪ್ರತಿವಾದಿಯ ಹೆಸರಿಗೆ ಖರೀದಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ಆಸ್ತಿಗಳ ಬಗ್ಗೆ ಯಾವುದೇ ಹಿಸ್ಸೆ ದಿಸ್ಸೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಹಿಸ್ಸೆಗೆ ಕೊಡಬೇಕಾಗುತ್ತದೆ ಎಂದು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ **2** ಮತ್ತು **4** ನೇ ಪ್ರತಿವಾದಿಯ ಪರಃ-

ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

ಸಹಿ/-

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ಬ್ಯಾಡಗಿ.